# ಅಪ್ಪನ ಬೆವರು

■ ಅಕ್ಬರ್ ಸಿ. ಕಾಲಿಮಿರ್ಚಿ
ಕಲೆ: ಸಂತೋಷ್ ಸಸಿಹಿತ್ಲು

ಆಗಿನ್ನು ಚಂದುಸಾಬರ ಮಗ ಚಿಕ್ಕವನು. ಮಗ ಅಕ್ಬರನಿಗೆ ಅಪ್ಪನ ಮೇಲೆ ತುಂಬಾ ಅಕ್ಕರೆ. ದುಡಿಮೆಗೆ ಎಂದು ಹೋದ ಚಂದುಸಾಬರು ಮನೆಗೆ ಬಂದರೆಂದರೆ ಮಗನಿಗೆ ಹಬ್ಬವೋ ಹಬ್ಬ. ಹೊಲಕ್ಕೆ ಹೋದಾಗಲೆಲ್ಲ ಹೊಲದಲ್ಲಿರುವ ಹೆಸರು ಬಳ್ಳಿ, ಅಲಸಂದೆ ಬಳ್ಳಿ ಕಾಯಿಗಳ ಹರಿದು, ಜೇಬಲ್ಲಿ ತುಂಬಿಕೊಂಡು ಬಂದು ಆಟ ಆಡುವ ಮಗ, ಅಕ್ಬರನ ಕರೆದು ಕೊಡುತ್ತಿದ್ದರು. ಆರು ವರ್ಷದ ಮಗನಿಗೆ ಅಪ್ಪ ಕೊಟ್ಟ ಹೆಸರುಕಾಯಿ, ಅಲಸಂದಿಕಾಯಿ, ಎರಡು ಕೈ ತುಂಬಿ ಕೆಳಗೆ ಚೆಲ್ಲುತ್ತಿದ್ದವು. ಪುಟ್ಟ ಕೈಗಳಿಂದ ಚೊಣ್ಣದ ಜೇಬಿನಲ್ಲಿ ಎರಡು ಕಡೆ ತುಂಬಿಕೊಂಡು ಗೆಳೆಯರ ಕೂಡಿ ಹಂಚಿ ತಿನ್ನುವ ಆಸೆ. ಎಷ್ಟೇ ಅವಸರ ಮಾಡಿದರು ಜೇಬಿನಲ್ಲಿ ತುಂಬಿಕೊಳ್ಳಲು ತಡವಾಗುತ್ತಿತ್ತು. ಮಗನ ನೋಡಿದ ಅಪ್ಪ, ಹತ್ತಿರ ಕರೆದು ಕೆಳಗೆ ಬಿದ್ದ ಕಾಯಿಗಳನ್ನು ಪ್ರೀತಿಯಿಂದ ಜೇಬು ತುಂಬಿಸಿದರು. ಈ ಸಡಗರವನ್ನು ಬೇಗನೆ ಗೆಳೆಯರಿಗೆ ತೋರಿಸಿ ನಾಲ್ಕಾರು ಗೆಳೆಯರಿಗೆ ಹಂಚುವ ಅವಸರ. ಮನೆ ಒಳಗೆ ಹೋಗದೆ ಮನೆ ಬಾಗಿಲ ಬಳಿ ನಿಂತೆ ಇದ್ದು, ಅಪ್ಪ ಕೊಟ್ಟ ಕಾಯಿಗಳನ್ನು ತುಂಬಿದ ಜೇಬು ಬಿಗಿ ಹಿಡಿದು ಟಣ್ಣನೆ ಅಂಗಳಕ್ಕೆ ಜಿಗಿದು, ಗೆಳೆಯರ ಹುಡುಕ ಹೊರಟ. ಮನೆ ಮನೆಗೆ ಹೋಗಿ, ಬಸವ, ಸಿದ್ದ, ಹನುಮ, ಸೀನ, ಕಾಶೀಮನ ಕರೆದು, ಮನೆಗೆ ಹತ್ತಿರ ಇರುವ ಮಂಗಳೇಶ್ವರ ದೇವಸ್ಥಾನದ ಕಾಂಪೌಂಡಿನ ಒಳಗೆ ನುಗ್ಗಿ, ಗೆಳೆಯರಿಗೆ ಜೇಬಿನಲ್ಲಿ ಇರುವ ಹಸಿ ಹೆಸರುಕಾಯಿ, ಹಸಿ ಅಲಸಂದೆಕಾಯಿ, ಚೋಟು ಕೈಯಿಂದ ನೀಡಿದ.

ಅಕ್ಬರನ ಗೆಳೆಯರಿಗೆ ಖುಷಿಯೋ ಖುಷಿ. ಹಸಿಕಾಯಿ ಸುಲಿದು ಬಾಯಿಯೊಳಗೆ ಹಾಕಿಕೊಂಡು ಅಗಿಯ ತೊಡಗಿದರು. ಅಗೆದು ತಿಂದ ಹಸಿಕಾಳುಗಳು ನೊರೆ ಹಾಲಿನಂತೆ ಸ್ವಾಟಿ ಮೂಲಕ ಇಳಿಯತೊಡಗಿತು. ಕಬ್ಬಿನ ಹಾಗೆ ಅಗೆದದ್ದೇ ಅಗೆದಿದ್ದು. ಅದಕ್ಕಿಂತ ಮಕ್ಕಳ ಸಂತಸಕ್ಕೆ ಯಾವ ಸಂಭ್ರಮವೂ ಬೇಕಿರಲಿಲ್ಲ. ಇಷ್ಟ ಬಂದ ಆಟ ಆಡಿಕೊಂಡು ಸಾಕೆನಿಸಿದಾಗ ಎಲ್ಲರೂ ಮನೆಗೆ ಹಿಂದಿರುಗಿದರು. ಸ್ವಲ್ಪ ಹೊತ್ತು ಅಷ್ಟೇ. ಮತ್ತೆ ಮನೆಯಿಂದ ಹೊರ ಬಿದ್ದ ಮಕ್ಕಳು ರಜಾ ದಿನಗಳಲ್ಲಿ ಹೊಲಕ್ಕೆ ಹೋಗುವ, ಹಳ್ಳದ ನೀರನ್ನು ಮೈಮೇಲೆ ಎರಚಾಡಿ ಹಿಗ್ಗುತ್ತಿದ್ದರು. ಅಕ್ಬರನ ಸುತ್ತ ನೆರೆದ ಗೆಳೆಯರು ನಿಮ್ಮ ಅಪ್ಪ ತರುವ ಕಾಯಿಗಳು, ಹಣ್ಣುಗಳು, ಎಲ್ಲಿಂದ ತರುತ್ತಾರೆಂದು ಸಿದ್ಧ ಕೇಳಿದ. ಅದು ನಮ್ಮ ತೋಟದ ಇನ್ನಿತರ ಹೊಲದಲ್ಲಿ ಬಿತ್ತನೆ ಮಾಡಿದ್ದು. ದಿನಾಲು ಮುಂಜಾನೆ ಐದು ಗಂಟೆಗೆ ಎದ್ದು ಹೊಲಕ್ಕೆ ಹೋಗಿ, ಕಸ ತೆಗೆದು, ಅವುಗಳಿಗೆ ನೀರು ಹರಿಸಿ, ವಾಪಸ್ ಬರುತ್ತಾರೆ. ಬರುವಾಗ ಗಿಡದಲ್ಲಿರುವ ಕಾಯಿಗಳು, ಬಳ್ಳಿಯಲ್ಲಿರುವ ಶೇಂಗಾವನ್ನು, ಮೆಕ್ಕೆಜೋಳದ ತೆನೆಯನ್ನು ನನಗಾಗಿ ತರುತ್ತಾರೆ. ಹಾಗಾದರೆ ನಿಮ್ಮ ಹೊಲಕ್ಕೆ ಹೋಗೋಣ ಎಂದರು. ಹಳ್ಳದ ನೀರಲ್ಲಿ ಆಟ ಆಡಿದ್ದಕ್ಕೆ ಗೆಳೆಯರೆಲ್ಲರ ಬಟ್ಟೆಗಳು ಹಸಿಯಾಗಿದ್ದವು.

ಬಸವ ಮನೆಗೆ ಹೋಗಿ, ಹಸಿವಿಗೆ ಏನಾದರೂ ತಿಂದು, ಮನೆಯಲ್ಲಿ ಹೇಳಿ ಬರೋಣ ಎಂದ. ಎಲ್ಲ ಗೆಳೆಯರು ಆಗಲಿ ಅಂದರು. ಹಿಂತಿರುಗಿ ಬಂದು ಅವರವರ ತಾಯಿಗೆ, ಅಜ್ಜಿಗೆ, ಹೊಲಕ್ಕೆ ಹೋಗಿ ಬರುವುದಾಗಿ ತಿಳಿಸಿ ರೊಟ್ಟಿ ಪಲ್ಯ ಹಚ್ಚಿ ತಿಂದು ಬಾಯಿ ವರಿಸಿಕೊಳ್ಳುತ್ತಾ ಅಂಗಳಕ್ಕೆ ಜಿಗಿದು ಒಬ್ಬರಿಗೊಬ್ಬರು ಕೂಡಿದರು. ಮತ್ತೆ ಮನದೊಳಗೆ ಕನಸು ಚಿಗುರಿ ಉತ್ಸಾಹದಿಂದ ಹೆಜ್ಜೆ ಹಾಕ ತೊಡಗಿದರು. ದಾರಿಯಲ್ಲಿ ಕಾಣುವ ಹೊಲದ ಬದುವಿನ ಗಿಡಗಳು, ಮರಗಳು, ಪಕ್ಷಿಗಳು, ಪ್ರಾಣಿಗಳ ನೋಡುತ್ತಾ ಅವುಗಳ ಚಿಗುರು, ಹೂವು, ಕಾಯಿ, ತರತರದ ಹೂಗಳ ವೀಕ್ಷಿಸುತ್ತ ಹುಣಸೆ ಚಿಗುರು, ಎಳೆ ಕಾಯಿಗಳ ದಿಟ್ಟಿಸುತ, ಮಾವಿನ ಮರ ಕಂಡಲ್ಲಿ ಗೊಂಚಲ ಕಾಯಿಯ ನೋಡಿದ ಎಲ್ಲರಿಗೂ ಬಾಯಲ್ಲಿ ನೀರೂರಿತು. ಹಾದಿಯಲಿ ಎಮ್ಮೆ, ಕರು, ಆಡು, ಕುರಿ, ಆಕಳು, ಅದರ ಕರು, ಮೇಯಲು ಹೊರಟ ಎತ್ತುಗಳ ಗುಂಪು ಅವುಗಳ ಮುಟ್ಟುವ, ಮೈಮೇಲೆ ಕೈಹಾಕಿ

